# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5037/2023 ಫ್ರಾಸಾ-19
ಚಾಸಾ-23

ದಿನಾಂಕ: 20-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಗುರುಸ್ವಾಮಿ |
| **ತಂದೆಯ / ಗಂಡನ ಹೆಸರು** | ಸಂಜೀವಪ್ಪ |
| **ವಯಸ್ಸು** | 48 |
| **ಉದ್ಯೋಗ** | ಕೂಲಿ |
| **ವಾಸಸ್ಥಳ** | ಸೂಲನಾಯಕನಹಳ್ಳಿ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಮೃತ ಲಕ್ಷ್ಮೀ ನನ್ನ ಸೊಸೆ ಆಗಬೇಕು. ವಿ.ಸಿ. ಮುಖಾಂತರ ಹಾಜರುಪಡಿಸಿರುವ ಆರೋಪಿ ಲಕ್ಷ್ಮೀಯ ಗಂಡ. ಲಕ್ಷ್ಮೀ ಈಗ ಜೀವಂತ ಇರುವುದಿಲ್ಲ. ಲಕ್ಷ್ಮೀ ತನ್ನ ಗಂಡ ಮನೆಯಲ್ಲಿ ಕೊಲೆ ಆಗಿರುತ್ತಾಳೆ. ಒಂದುವರೆ ವರ್ಷದ ಹಿಂದೆ ನಾನು ನನ್ನ ಚಿಕ್ಕಮ್ಮನ್ನು ನೋಡಲು ಹೋಗಿದ್ದಾಗ ಬೂದಿಬೆಟ್ಟದಲ್ಲಿ ಲಕ್ಷ್ಮೀ ಶವವನ್ನು ದೂರದಿಂದ ನೋಡಿರುತ್ತೇನೆ. ಲಕ್ಷ್ಮೀ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ. ನಾನು ಪಾವಗಡ ಆಸ್ಪತ್ರೆಗೆ ಹೋಗಿದ್ದೆ ಶವಗಾರದಲ್ಲಿ ಲಕ್ಷ್ಮೀ ಶವವನನ್ನು ನೋಡಿರುತ್ತೇನೆ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ. 16.08.2023 ರಂದು ಬೆಳಿಗ್ಗೆ 10-00 ರಿಂದ 1-00 ಗಂಟೆಯವರೆಗೂ ಪಾವಗಡ ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ಮೃತ ಲಕ್ಷ್ಮೀ ಶವದ ಪಂಚನಾಮೆಯನ್ನು ಮಾಡಿರುತ್ತಾರೆ

ಎಂದರೆ ಸರಿಯಲ್ಲ. ನಾನು ಶವಗಾರದ ಒಳಗೆ ಹೋಗಿ ನೋಡಿದಾಗ ಮೃತ ಲಕ್ಷ್ಮೀಗೆ ತಲೆಗೆ ಗಾಯವಾಗಿ ಮೆದುಳು ಹೊರಗೆ ಬಂದಿತ್ತು ಮತ್ತು ಬಲಕಿವಿಯ ಬಳಿ ಗಾಯವಾಗಿತ್ತು ಎಂದರೆ ಸರಿಯಲ್ಲ. ಮೃತ ಲಕ್ಷ್ಮಿ ಫೋನ್ ನಲ್ಲಿ ಮಾತನಾಡುತ್ತಾಳೆ ಬೇರೆಯವರ ಸಂಬಂಧ ಇಟ್ಟುಕೊಂಡಿದ್ದಾಳೆಂದು ಮೃತ ಲಕ್ಷ್ಮೀ ಶೀಲವನ್ನು ಶಂಕಿಸಿ ರಾಮಾಂಜಿ ಅವಳ ಮೇಲೆ ಗಲಾಟೆ ಮಾಡಿ ಮನೆಯ ಮುಂದೆ ಲಕ್ಷ್ಮೀಯ ತಲೆಗೆ ಹೊಡೆದಿದ್ದರಿಂದ ಸತ್ತು ಹೋಗಿರುತ್ತಾಳೆಂದು ಗೊತ್ತಾಯಿತು ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹೇಳಿಕೆಯನ್ನು ನಿಪಿ-5(ಎಫ್) ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು . ಆರೋಪಿ ಪರ ಶ್ರೀ ಪಿ.ಎನ್.ಆರ್. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**